ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ
ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ
ಚಾವಿಸನಿನಿ, ಮೈಸೂರು-570017
Telephone No:0821-2417105

CHAMUNDESHWARI ELECTRICITY
SUPPLY CORPORATION LIMITED
(A Government of Karnataka Undertaking)
Corporate office, CESC , Mysuru-570017
Web Site: www.cescmysore.org
E-mail ID : cfo@cescmysore.org

Company Identity Number(CIN): U40109KA2004SGC035177

**ವಿಷಯ:** 2020-21 ನೇ ಸಾಲಿನ 2 ನೇ ತ್ರೈಮಾಸಿಕ ಅವಧಿಗೆ ದಸರಾ-2020 ರ ದೀಪಾಲಂಕಾರಕ್ಕಾಗಿ ಲೆಕ್ಕಶೀರ್ಷಿಕೆ 76 ರಡಿಯಲ್ಲಿ ಕಂದಾಯ ಬಜೆಟ್‌ನ್ನು ಬಿಡುಗಡೆಗೊಳಿಸುವ ಬಗ್ಗೆ.

**ಉಲ್ಲೇಖ:**
1. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 22 ದಿನಾಂಕ: 08.04.2020.
2. ಈ ಕಛೇರಿ ಪತ್ರದ ಸಂಖ್ಯೆ 1355 ದಿನಾಂಕ : 28.04.2020.
3. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 1637 ದಿನಾಂಕ 04.05.2020.
4. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 3760 ದಿನಾಂಕ 10.06.2020.
5. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ ಸಿವೈಎಸ್ 478 ದಿನಾಂಕ 15.07.2020
6. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 9166 ದಿನಾಂಕ 26.08.2020
7. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 9575-78 ದಿನಾಂಕ 31.08.2020
8. ಈ ಕಛೇರಿ ಅ.ಜ್ಞಾ ಪತ್ರ ಸಂಖ್ಯೆ 9776-77 ದಿನಾಂಕ 03.09.2020

***************

**ಪೀಠಿಕೆ:**

1. ಉಲ್ಲೇಖ (1) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಚಾ.ವಿ.ಸ.ನಿ.ನಿ ಯ ಎಲ್ಲಾ ಲೆಕ್ಕಘಟಕಗಳಿಗೆ ವಿತ್ತ ವರ್ಷ 2020-21 ನೇ ಸಾಲಿಗೆ ದಿನಾಂಕ: 01.04.2020 ರಿಂದ 30.06.2020 ರ ಮೊದಲನೇ ತ್ರೈಮಾಸಿಕ ಆವಧಿಗೆ ಮುಖ್ಯ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಒಟ್ಟು 16391.00 ಲಕ್ಷಗಳ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
2. ಉಲ್ಲೇಖ (2) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಪ್ರಧಾನ ವ್ಯವಸ್ಥಾಪಕರು (ಖರೀದಿ) ಶಾಖೆಗೆ ಲೆಕ್ಕಶೀರ್ಷಿಕೆ 74.8027 (Repairs to Computers & Printers) ರಡಿಯಲ್ಲಿ ರೂ.5.00 ಲಕ್ಷ ಹಾಗೂ ಲೆಕ್ಕಶೀರ್ಷಿಕೆ 76.1537 (Printing and Stationary) ರಡಿಯಲ್ಲಿ ಮುದ್ರಣ ಮತ್ತು ಇತರೆಗಾಗಿ ರೂ 50.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
3. ಉಲ್ಲೇಖ (3) ರಲ್ಲಿ ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ) ಶಾಖೆಯಿಂದ ಕಛೇರಿ ಟಿಪ್ಪಣಿ ಮೂಲಕ ಕೋರೋನ ವೈರಸ್ ತಡೆಗಟ್ಟುವ ಸಂಬಂಧ ಮುಂಜಾಗ್ರತಾ ಕ್ರಮವಾಗಿ ಮೈಸೂರು ನಗರದ ವಿವಿದ ಸ್ಥಳಗಳಲ್ಲಿ ಹೊಸದಾಗಿ ಸ್ಥಾಪಿಸಿರುವ ಮಾರುಕಟ್ಟೆಗಳಿಗೆ ವಿದ್ಯುತ್ ಸೌಲಭ್ಯ ಕಲ್ಪಿಸಲು ಸಲುವಾಗಿ ತಾತ್ಕಾಲಿಕ ವಿದ್ಯುತ್ ದೀಪಗಳನ್ನು ಅಳವಡಿಸಲು ಒಟ್ಟಾರೆ 3.00 ಲಕ್ಷಗಳ ಕಂದಾಯ ಬಜೆಟ್/ಅನುದಾನವನ್ನು ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿಗೆ ಬಿಡುಗಡೆ ಮಾಡಲಾಗಿದೆ.
4. ಉಲ್ಲೇಖ (4) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೈಸೂರು ರವರಿಗೆ ಲೆಕ್ಕಶೀರ್ಷಿಕೆ 74, 76 ರಡಿಯಲ್ಲಿ ರೂ.220 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
5. ಉಲ್ಲೇಖ (5) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಚಾ.ವಿ.ಸ.ನಿ.ನಿ ಯ ಎಲ್ಲಾ ಲೆಕ್ಕಘಟಕಗಳಿಗೆ ವಿತ್ತ ವರ್ಷ 2020-21 ನೇ ಸಾಲಿಗೆ ದಿನಾಂಕ: 01.07.2020 ರಿಂದ 30.09.2020 ರ ಎರಡನೇ ತ್ರೈಮಾಸಿಕ ಆವಧಿಗೆ ಮುಖ್ಯ ಲೆಕ್ಕಶೀರ್ಷಿಕೆ 74, 75 ಮತ್ತು 76 ರಡಿಯಲ್ಲಿ ಒಟ್ಟು 15967.81 ಲಕ್ಷಗಳ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.
6. ಉಲ್ಲೇಖ (6) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ಪ್ರಧಾನ ವ್ಯವಸ್ಥಾಪಕರು, ಆಂತರಿಕ ನಿರ್ವಹಣೆ ಶಾಖೆ ನಿಗಮ ಕಾರ್ಯಾಲಯ ರವರಿಗೆ 76.1127 ರಡಿಯಲ್ಲಿ 6.53 ಲಕ್ಷ, ಉಪಪ್ರಧಾನ ವ್ಯವಸ್ಥಾಪಕರು(ಕಾಮಗಾರಿ), ನಿಗಮ ಕಾರ್ಯಾಲಯ ರವರಿಗೆ 74.2007 ರಡಿಯಲ್ಲಿ 50.00 ಲಕ್ಷ ಹಾಗೂ 74.3007 ರಡಿಯಲ್ಲಿ 25.00 ಲಕ್ಷ ಮತ್ತು ಅಧೀಕ್ಷಕ ಇಂಜಿನಿಯರ್ (ವಿ), ಕಾ ಮತ್ತು ಪಾ ವೃತ್ತ, ಮೈಸೂರು ರವರಿಗೆ ಲೆಕ್ಕಶೀರ್ಷಿಕೆ 76.1297 ರಡಿಯಲ್ಲಿ 5.00 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್/ಖರೀದಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

7. ಉಲ್ಲೇಖ (7) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ವಿತ್ತ ವರ್ಷ 2019-20 ಹಾಗೂ 2020-21 ನೇ ಸಾಲಿಗೆ ನಿಗಮದ ನೌಕರರ ಸಮವಸ್ತ್ರ ಖರೀದಿಗಾಗಿ ಉಪಪ್ರಧಾನ ವ್ಯವಸ್ಥಾಪಕರು(ಖರೀದಿ), ರವರು ರೂ.65,59,405.00 ಗಳ ಖರೀದಿ ಅನುದಾನವನ್ನು ಕೋರಿದ್ದು, ಆಂತರಿಕ ನಿರ್ವಹಣೆ ಶಾಖೆ, ನಿಗಮ ಕಛೇರಿ, ಮೈಸೂರಿಗೆ ಲೆಕ್ಕಶೀರ್ಷಿಕೆ 75.7407 ರಲ್ಲಿ ರೂ. 65,59,405/-ಗಳ ಖರೀದಿ ಅನುದಾನ ಮತ್ತು ಎನ್.ಆರ್.ಮೊಹಲ್ಲಾ ವಿಭಾಗಕ್ಕೆ ಅಷ್ಟೇ ಮೊತ್ತದ ಕಂದಾಯ ಬಜೆಟ್ ಬಿಡುಗಡೆ ಮಾಡಲಾಗಿದೆ.
8. ಉಲ್ಲೇಖ (8) ರ ಈ ಕಛೇರಿ ಅ.ಜ್ಞಾ ಪತ್ರದಲ್ಲಿ ವಿತ್ತ ವರ್ಷ 2020-21 ನೇ ಸಾಲಿನ 2 ನೇ ತ್ರೈಮಾಸಿಕ ಅವಧಿಗೆ ಹೆಚ್ಚುವರಿಯಾಗಿ ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಚಾವಿಸನಿನಿ, ಮೈಸೂರು ರವರಿಗೆ, ಲೆಕ್ಕ ಶೀರ್ಷಿಕೆ 74.2007 ರಡಿಯಲ್ಲಿ ರೂ.45.00 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್‌ನ್ನು ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ಮುಂದುವರೆದು, ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮೈಸೂರು ರವರು ಸನ್ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ದಸರಾ ದೀಪಾಲಂಕಾರ ಕಾಮಗಾರಿಗಳನ್ನು ಅಚ್ಚುಕಟ್ಟಾಗಿ ನೇರವೇರಿಸಲು ನಿರ್ದೇಶಿಸಿರುವುದಾಗಿ ದೀಪಾಲಂಕಾರದ ಕಾಮಗಾರಿಗಳಿಗೆ ಲೆಕ್ಕ ಶೀರ್ಷಿಕೆ 76.1297 ರಡಿಯಲ್ಲಿ ಒಟ್ಟು ರೂ. 3,23,32,060.00 ಗಳ ಅನುದಾನ ಬಿಡುಗಡೆ ಮಾಡುವಂತೆ ಪತ್ರ ಸಂಖ್ಯೆ ಅಇಂ/ಕಾನಿಇಂ/ಸಕಾನಿಇಂ(ಕ)-1/ಎಫ್-72/20-21/5499-02/ದಿ.19.09.2020 ರಲ್ಲಿ ಕೋರಿರುತ್ತಾರೆ.

**ಕ್ರಸಂ. ಮುಲಅ/ಪ್ರವ್ಯ(ಲೆ&ಸಂ)/ಉಪ್ರವ್ಯ(ಸಂ&ಆವ್ಯ)/ಸಪ್ರವ್ಯ(ಃ&ಸಂ)/ವ್ಯ(ಹ&ಸಂ)/** 12071-74 **ದಿನಾಂಕ:** 29 SEP 2020

**ಅಧಿಕೃತ ಜ್ಞಾಪನಾ ಪತ್ರ**

ವಿತ್ತ ವರ್ಷ 2020-21 ನೇ ಸಾಲಿನ ದಸರಾ-2020 ರ ನಾಡಹಬ್ಬಕ್ಕೆ ಚಾವಿಸನಿನಿ ವತಿಯಿಂದ ದೀಪಾಲಂಕಾರದ ವ್ಯವಸ್ಥೆಯ ನಿರ್ಮಾಣದ ಕಾಮಗಾರಿಗೆ ಅಧೀಕ್ಷಕ ಇಂಜಿನಿಯರ್(ವಿ), ಕಾ ಮತ್ತು ಪಾ ವೃತ್ತ, ಮೈಸೂರು ರವರಿಗೆ ಲೆಕ್ಕ ಶೀರ್ಷಿಕೆ 76.1297 ರಡಿಯಲ್ಲಿ ಮಾನ್ಯ ವ್ಯವಸ್ಥಾಪಕ ನಿರ್ದೇಶಕರ ಅನುಮೋದನೆಯಂತೆ ರೂ.300.00 ಲಕ್ಷಗಳ ಹೆಚ್ಚುವರಿ ಕಂದಾಯ ಬಜೆಟ್/ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ಬಿಡುಗಡೆ ಮಾಡಲಾದ ಕಂದಾಯ ಬಜೆಟ್ ಅನ್ನು ಸಂಬಂಧಿಸಿದ ವಿಭಾಗಕ್ಕೆ ಮರುಹಂಚಿಕೆ ಮಾಡಲು ತಿಳಿಸಲಾಗಿದೆ. ಹಾಗೂ **ಸಾಧ್ಯವಾದಷ್ಟು ಮಟ್ಟಿಗೆ ವಿವಿಧ ಸಂಘ/ಸಂಸ್ಥೆಗಳಿಂದ/ಸರಬರಾಜುದಾರರಿಂದ ಪ್ರಯೋಜಕತ್ವ ಪಡೆಯಲು ಮೊದಲ ಆದ್ಯತೆ ನೀಡಿ, ಇಲಾಖಾ ವತಿಯಿಂದ ಮಾಡಲಾಗುವ ಖರ್ಚನ್ನು ಕಡಿಮೆ ಮಾಡಲು ಕ್ರಮ ವಹಿಸುವುದು.**

ಮುಖ್ಯ ಆರ್ಥಿಕ ಅಧಿಕಾರಿ
ಚಾವಿಸನಿನಿ, ನಿಗಮ ಕಛೇರಿ,
ಮೈಸೂರು

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು, (ಆಂತರಿಕ ಲೆಕ್ಕಪರಿಶೋಧನೆ), ಚಾ.ವಿ.ಸ.ನಿ.ನಿ, ನಿಗಮ ಕಛೇರಿ, ಮೈಸೂರು.
2. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಚಾವಿಸನಿನಿ, ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ),ಕಾ ಮತ್ತು ಪಾ ವೃತ್ತ, ಚಾವಿಸನಿನಿ, ಮೈಸೂರು
4. ಉಪಪ್ರಧಾನ ವ್ಯವಸ್ಥಾಪಕರು(ವಿ), ಎಂ.ಐ.ಎಸ್ ಶಾಖೆ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು- ಅಂತರ್ಜಾಲದಲ್ಲಿ ಪ್ರಕಟಿಸಲು.
5. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಎನ್.ಆರ್.ಮೊಹಲ್ಲಾ ಮತ್ತು ವಿ.ವಿ.ಮೊಹಲ್ಲಾ, ಚಾವಿಸನಿನಿ, ಮೈಸೂರು.
6. ಸಹಾಯಕ ಪ್ರಧಾನ ವ್ಯವಸ್ಥಾಪಕರು(ಹಣಕಾಸು ಶಾಖೆ), ಚಾವಿಸನಿನಿ, ನಿಗಮ ಕಛೇರಿ, ಮೈಸೂರು
7. ಸಹಾಯಕ (ಲೆಕ್ಕಗಳು), ಸಂಪನ್ಮೂಲ ಶಾಖೆ/ಮುಖ್ಯ ಕಡತ.